# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002
ದೂರವಾಣಿ: 080-22237455/22221286, ಇ-ಮೇಲ್: comm@bbmp.gov.in

ಸಂಖ್ಯೆ: ಬಿ.ಬಿ.ಎಂ.ಪಿ./ಆಕಾ/ಪಿಎಸ್ಆರ್ / ೭೬ /2021-22. ದಿನಾಂಕ: 21-04-2021

## ಆಂತರಿಕ ಕಛೇರಿ ಟಿಪ್ಪಣಿ

ರವರಿಗೆ,
ಎಲ್ಲಾ ವಲಯ ಆಯುಕ್ತರುಗಳು
/ಎಲ್ಲಾ ಜಂಟಿ ಆಯುಕ್ತರುಗಳು

ವಿಷಯ: ಕೋವಿಡ್ ಸೋಂಕಿನ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ RD 158 TNR 2020 ದಿನಾಂಕ: 20-04-2021

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ, ನಗರದಲ್ಲಿ ಕೋವಿಡ್ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸೋಂಕು ಹರಡುವಿಕೆಯನ್ನು ತಡೆಗಟ್ಟಲು ಘನ ಸರ್ಕಾರವು ಉಲ್ಲೇಖಿತ ಆದೇಶದಲ್ಲಿ ದಿನಾಂಕ: 21.04.2021 ರಿಂದ ಅನ್ವಯವಾಗುವಂತೆ ದಿನಾಂಕ:04.05.2021 ರವರೆಗೆ ಪಾಲಿಸಬೇಕಿರುವ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿರುತ್ತದೆ. ಸದರಿ ಮಾರ್ಗಸೂಚಿ ಅನ್ವಯ ರಾತ್ರಿ ಕರ್ಫ್ಯೂ, ವಾರಾಂತ್ಯ ಕರ್ಫ್ಯೂ, ನಿಷೇದಿತ ಚಟುವಟಿಗೆಗಳು, ಕಾಮಗಾರಿ ಚಟುವಟಿಕೆ, ವಾಣಿಜ್ಯ ಚಟುವಟಿಗೆಗಳಿಗೆ ಸೂಚಿಸಿರುವ ಮಾರ್ಗಸೂಚಿಗಳು, ಮದುವೆ ಸಮಾರಂಭ / ಅಂತ್ಯಸಂಸ್ಕಾರಕ್ಕೆ ನಿಗಧಿಪಡಿಸಿರುವ ಗರಿಷ್ಠ ಮಿತಿ, Covid Appropriate Behavior ಇತ್ಯಾದಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಿರುತ್ತದೆ.

ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರವು ಕೋವಿಡ್ ಸೋಂಕು ಹರಡುವಿಕೆಯನ್ನು ತಡೆಗಟ್ಟಲು ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿದ್ದು, ತಮ್ಮ ವಲಯ ವ್ಯಾಪ್ತಿಯಲ್ಲಿನ ಎಲ್ಲಾ ಅಧೀನ ಅಧಿಕಾರಿಗಳ ಸಹಯೋಗದೊಂದಿಗೆ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.

21/4/21
(ಗೌರವ ಗುಪ್ತ)
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ